**ಚಾಸಾ-1**

**ಪ್ರಾಸಾ-1**

**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ , ಧಾರವಾಡ.**

**ಸಾಕ್ಷಿದಾರನ ಹೆಸರು:** **ಮಲ್ಲಿಕಾರ್ಜುನ**

**ತಂದೆಯ ಹೆಸರು:** **ಬಸವಂತಪ್ಪ ದಾಸನ್ನವರ ಅಲಿಯಾಸ ಯಾದವಾಡ ಅಲಿಯಾಸ ಹುಬ್ಬಳ್ಳಿ**

**ವಯಸ್ಸು:** 49 **ವರ್ಷ**

**ಉದ್ಯೋಗ:** **ಕೂಲಿ ಕೆಲಸ**

**ವಾಸಸ್ಥಳ:** **ಅಮ್ಮಿನಬಾವಿ**

ಸತ್ಯ ಪ್ರತಿಜ್ಞೆಯ ಮೇರೆಗೆ ದಿ. **30.10.2023.**

ಮುಖ್ಯ ವಿಚಾರಣೆ: ಮಾನ್ಯ ಸಸಅ ರವರಿಂದ

ಮೃತ ಗೂಳಪ್ಪ ನನ್ನ ಸ್ವಂತ ತಮ್ಮ. ಚಾಸಾ**8** ನನ್ನ ಮಗ. ಚಾಸಾ**9** ನನ್ನ ಹೆಂಡತಿಯ ತಂಗಿ ಮಗ.

ಈಗ ಒಂದುವರೆ ವರ್ಷಗಳ ಹಿಂದೆ ರಾತ್ರಿ **9.30** ರ ಸಮಯದಲ್ಲಿ ಅಮ್ಮಿನಬಾವಿ ಗ್ರಾಮದಿಂದ ಹಾರೊಬೆಳವಡಿ ಗ್ರಾಮದಲ್ಲಿರುವ ಜಮಿನಿಗೆ ಕಡಲೆ ಬೆಳೆ ಕಿಳಲು ಚಾಸಾ**8,9** ಹಾಗೂ ಮೃತ ಗೂಳಪ್ಪ ಚಕ್ಕಡಿ ಗಾಡಿಯಲ್ಲಿ ಹೊರಟ್ಟಿದ್ದರು. ರಾತ್ರಿ **9.30** ರ ಸಮಯದಲ್ಲಿ ಚಾಸಾ**8** ರವರು ನನಗೆ ಪೊನ ಮಾಡಿ ಸದರಿ ತಮ್ಮ ಚಕ್ಕಡಿ ಗಾಡಿಗೆ ಹಾರೊಳಬೆವಡಿ ಹತ್ತಿರ ಅಪಘಾತವಾಗಿದ್ದು ಅದರಲ್ಲಿ ಗೂಳಪ್ಪ ತಿರಿಕೊಂಡಿದ್ದಾಗಿ ತಿಳಿಸಿದನು. ಆಗ ನಾನು ಚಾಸಾ**3,5** ಮತ್ತು **13** ರವರನ್ನು ಕರೆದುಕೊಂಡು ಅಪಘಾತವಾದ ಸ್ಥಳಕ್ಕೆ ಹೋದೆ. ಹೊಗಿ ನೊಡುವಷ್ಟರಲ್ಲಿ ನನ್ನ ತಮ್ಮ ಗೂಳಪ್ಪ ತಿರಿಕೊಂಡಿದ್ದರು. ಆತನ ತಲೆಗೆ ಪೆಟ್ಟಾಗಿ ಆತನ ಮೂಗಿನಿಂದ ರಕ್ತ ಬರುತ್ತಿತ್ತು. ಹಾಗೂ ಚಾಸಾ**9** ರವರಿಗೂ ಸಹ ಕಾಲಿಗೆ ಪೆಟ್ಟಾಗಿ ಆತನ ಕಾಲಿನ ಮೂಳೆ ಮುರಿದಿತ್ತು. ಚಾಸಾ**8** ರವರ ನಡುವಿಗೆ ಪೆಟ್ಟಾಗಿತ್ತು.

ಧಾರವಾಡ ಕಡೆಯಿಂದ ಸವದತ್ತಿ ಕಡೆಗೆ ಹೊರಟ ವಾಹನ ಸದರಿ ಚಾಸಾ**8**

ಮತ್ತು **9** ರವರು ಹೊರಟಿದ್ದ ಚಕ್ಕಡಿ ಗಾಡಿಯ ಮುಂದಿನ ಭಾಗಕ್ಕೆ ಡಿಕ್ಕಿ ಪಡಿಸಿತು ಎಂದು ಚಾಸಾ**8** ರವರು ನನಗೆ ತಿಳಿಸಿದ್ದರು. ಸದರಿ ಅಪಘಾತದಿಂದಾಗಿ ಸದರಿ ಚಕ್ಕಡಿಯ ಎರಡು ಹೋರಿಗಳಿಗೂ ಸಹ ತಿರ್ವ ಸ್ವರೂಪದ ಗಾಯಗಳು ಅಗಿದ್ದು ಆ ಪೈಕಿ ಒಂದು ಹೊರಿ ಸ್ಥಳದಲ್ಲಿ ಮೃತಪಟ್ಟಿತ್ತು. ಹಾಗೂ ಇನ್ನೊಂದು ಹೋರಿ ಮನೆಗೆ ತಂದ **4** ದಿನಗಳಲ್ಲಿ ತಿವ್ರ ಸ್ವರೂಪದ ಗಾಯ ಹೊಂದಿದ್ದರಿಂದ ತಿರಿಕೊಂಡಿತ್ತು.

ಅಪಘಾತವಾದ ನಂತರ ಚಾಸಾ**8** ಮತ್ತು **9** ರವರನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದೆವು. ನತಂರ ನಾನು ಪೋಲಿಸ ಠಾಣೆಗೆ ಬಂದು ಅಪಘಾತಕ್ಕೆ ಸಂಬಂದಿಸಿದಂತೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನಾನು ಹೇಳಿದ ಹಾಗೇ ಚಾಸಾ**13** ರವರು ಬರೆದಿರುತ್ತಾರೆ. ಸದರಿ ದೂರನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**1** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು.

ಇದಾದ ನಂತರ ಪೋಲಿಸರು ಠಾಣೆಗೆ ಕರೆಸಿ ಅಪಘಾತಪಡಿಸಿದ ವಾಹನವನ್ನು ನನಗೆ ತೋರಿಸಿದ್ದರು. ಸದರಿ ಅಪಘಾತಪಡಿಸಿದ ವಾಹನ ಬುಲೇರೊ ವಾಹನ ಎಂದು ನನಗೆ ಪೋಲಿಸ ಠಾಣೆಯಲ್ಲಿ ನೊಡಿ ಗೊತ್ತಾಯಿತು. ಸದರಿ ಬುಲೇರೊ ವಾಹನದ ಚಾಲಕ ಯಾರು ಎಂದು ನನಗೆ ಗೊತ್ತಾಗಲಿಲ್ಲ ಸದರಿ ವಾಹನದ ನಂಬರ ಸಹ ನನಗೆ ಗೊತ್ತಾಗಲಿಲ್ಲ.

ಅಪಘಾತವಾದ **4** ದಿನಗಳ ನಂತರ ಪೋಲಿಸರು ನನ್ನನ್ನು ಅಪಘಾತ ಸ್ಥಳದಲ್ಲಿ ಕರೆಸಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಪಂಚನಾಮೆ ಕಾಲಕ್ಕೆ ಅಪಘಾತ ಸ್ಥಳವನ್ನು ನಾನು ತೊರಿಸಿರುತ್ತೇನೆ. ಸದರಿ ಕಾಲಕ್ಕೆ ಚಾಸಾ4 ಮತ್ತು **5** ರವರು ಸಹ ಇದ್ದರು. ಸದರಿ ಪಂಚನಾಮೆಗೆ ನಾನು ಸಹಿ ಹಾಕಿರುತ್ತೇನೆ. ಪಂಚನಾಮೆಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**2** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ಕಚ್ಚಾ ನಕ್ಷೆಯ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**3** ಎಂದು , ಸಾಕ್ಷಿಯ ಸಹಿಯನ್ನು **ನಿಪಿ.3(ಎ)** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೊ ವನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು

**ನಿಪಿ.4** ಎಂದು ಗುರುತಿಸಲಾಯಿತು. ಅದೇ ರೀತಿ ಸದರಿ ದಿನ ತೆಗೆದ ಚಕ್ಕಡಿ ಗಾಡಿಯ ಫೋಟೊ ವನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**5** ಎಂದು ಗುರುತಿಸಲಾಯಿತು. ಹಾಗೂ ಎರಡು ಎತ್ತುಗಳ ಫೋಟೊ ಗಳನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು **ನಿಪಿ.6 ಮತ್ತು 7** ಎಂದು ಗುರುತಿಸಲಾಯಿತು. ಹಾಗೂ ಪೋಲಿಸರು ಠಾಣೆಯಲ್ಲಿ ತೊರಿಸಿದ ಬುಲೇರೊ ವಾಹನದ **5** ಫೋಟೊಗಳನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅವುಗಳನ್ನು ನಿಪಿ.**8** ರಿಂದ **12** ಎಂದು ಗುರುತಿಸಲಾಯಿತು. ನಮಗೆ ದಾಸನ್ನವರ ಅಲಿಯಾಸ ಯಾದವಾಡ ಅಲಿಯಾಸ ಹುಬ್ಬಳ್ಳಿ ಎಂತಲೂ ಕರೆಯುತ್ತಾರೆ. ಚಾಸಾ**9** ಹೆಸರು ಬಸಲಿಂಗಪ್ಪ ಎಂದು ಇದ್ದು ಆತನಿಗೆ ಪ್ರವೀಣ ಎಂತಲೂ ಕರೆಯುತ್ತಾರೆ. ಆ ಬಗ್ಗೆ ನಾನು ಪೋಲಿಸರಿಗೆ ಹೇಳಿರುತ್ತೇನೆ. ನನಗೆ ಅಪಘಾತ ಪಡಿಸಿದ ಬುಲೇರೊ ಚಾಲಕನ ಹೆಸರು ಗೊತ್ತಾಗಲಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ವಿನಂತಿಸುತ್ತಾರೆ. ಸಾಕ್ಷಿ ಹೇಳಿದ ಈ ಮೇಲಿನ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳನ್ನು ಪರಿಶೀಲಿಸಿದಾಗ ಸಾಕ್ಷಿಯ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳಿಗೆ ವ್ಯತಿರಿಕ್ತ ಇದ್ದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿಸಸ ರವರಿಂದ**

ದಿಃ 09.02.2022 ರಂದು ನಾನು ಪೋಲಿಸರ ಮಂದೆ ಪುನರ್ ಹೇಳಿಕೆ ನೀಡಿ ಸದರಿ ಹೇಳಿಕೆಯಲ್ಲಿ ಚಾಸಾ9 ರವರ ಹೆಸರು ಪ್ರವಿಣ ಮುದಕಪ್ಪ ಧನಿಗೊಂಡ ಎಂದು ಬರೆಸಿದ್ದು , ಅದರೇ ಆತನ ಹೆಸರು ಬಸಲಿಂಗಪ್ಪ ಎಂದು ಇದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಹಾಗೂ ನನ್ನ ಮಗನಾದ ಚಾಸಾ8 ರವರಿಗೆ ಆನಂದ ಮಲ್ಲಿಕಾರ್ಜುನ ಧನಸನ್ನವರ ಅಲಿಯಾಸ ಹುಬ್ಬಳ್ಳಿ ಅಲಿಯಾಸ ಯಾದವಾಡ ಎಂದು ಕರೆಯುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನನ್ನ ಮಗ ಚಾಸಾ8 ರವರು ತನಗೆ ಅಪಘಾತ ಪಡಿಸಿದ ವಾಹನ ಬುಲೇರೊ ವಾಹನ ಎಂದು ಹೇಳಿದರು ಸಹ ನಾನು ಗಡಿಬಿಡಿಯಲ್ಲಿ ದೂರಿನಲ್ಲಿ ಯಾವುದೋ ವಾಹನ

ಅಪಘಾತ ಪಡಿಸಿದೆ ಎಂದು ಬರೆಸಿದ್ದು ಅದನ್ನು ಬುಲೇರೊ ವಾಹನ ಎಂದು ಅಳವಡಿಸಿಕೊಳ್ಳಬೆಕು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಅದೇ ರೀತಿ ದಿಃ 19.02.2022 ರಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿ ಸದರಿ ಅಪಘಾತ ಪಡಿಸಿದ ವಾಹನವನ್ನು ಚಾಸಾ8 ರವರು ನನ್ನ ಸಮಕ್ಷಮ ಪೋಲಿಸ ಠಾಣೇಯಲ್ಲಿ ಗುರುತಿಸಿದ್ದು ಅದರ ನಂಬರ ಕೆಎ.49/5874 ಆಗಿದ್ದು , ಅದು ಮಹಿಂದ್ರಾ ಬುಲೇರೊ ಪಿಕಅಪ ವಾಹನ ಇದ್ದು ಅದರ ಮುಂಭಾಗದ ಎಡಭಾಗದ ಹೆಡ ಲೈಟ , ರೆಡಿಯೇಟರ ಬಿಲ್ , ಮುಂದಿನ ಗ್ಲಾಸ ಜಖಂಗೊಂಡಿರುತ್ತದೆ ಎಂದು ನಾನು ನೊಡಿ ಪೋಲಿಸರ ಮಜದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಹಾಗೂ ಸದರಿ ಬುಲೇರೊ ವಾಹನದ ಚಾಲಕ ಸಲ್ಮಾನಖಾನ ರಫಿಕ ಅಲಿಯಾಸ ರಫಿಕಸಾಬ ಶೇಖ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ಹಾಗೂ ನಾನು ಈ ಮೇಲೆ ಹೇಳಿದಂತೆ ನಾನು ಹೇಳಿಕೇ ನೀಡಿರುತ್ತೇನೆ ಎಂದರೆ ಸರಿ.

ದಿಃ 09.02.2022 ರಂದು ಪೋಲಿಸರು ಘಟನಾ ಸ್ಥಳದಲ್ಲಿ ನನ್ನ ಸಮಕ್ಷಮ ಪಂಚನಾಮೆ ಮಾಡಲು ಕಾಲಕ್ಕೆ ಸ್ಥಳದಲ್ಲಿ ದೊರೇತ ನನ್ನ ಚಕ್ಕಡಿಯ ಮೂರು ಬಿಡಿ ಭಾಗಳನ್ನು ಹಾಗೂ ಮಹಿಂದ್ರಾ ಕಂಪನಿಯ ವಾಹನದ ಮೂರು ಬಿಡಿ ಭಾಗವನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿ. ಹಾಗೂ ಸದರಿ ಪಂಚನಾಮೆಯನ್ನು ಸಂಜೆ 5.30 ರಿಂದ 6.30 ವರೆಗೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ**

1. ಅಪಘಾತವಾದ ನಿಖರವಾದ ದಿನಾಂಕವನ್ನು ನನಗೆ ಹೇಳಲು ಬರುವುದಿಲ್ಲ**.** ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೊಡಿಲ್ಲ ಎಂದರೆ ಸರಿ. ಅಪಘಾತ ವನ್ನು ನಾನು ನೊಡದೇ ಇದುದ್ದರಿಂದ ಅಪಘಾತ ಯಾವ ರೀತಿ ಆಗಿದೆ ಎಂದು ನನಗೆ ಹೆಳಲು ಬರುವುದಿಲ್ಲ ಎಂದರೆ ಸಾಕ್ಷಿ ನನ್ನ ಮಗ ಹೇಳಿದ ಆಧಾರದ ಮೇಲೆ ಹೇಳುತ್ತಿದ್ದೇನೆ ಎನ್ನುತ್ತಾರೆ**.** ನಾನು ಪೋಲಿಸರ ಮುಂದೆ ಪುನರ್ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿ. ನಿಪಿ**.1** ದೂರಿನಲ್ಲಿ ಯಾವುದೋ ಅನಾಮಧೇಯ ವಾಹನ ಅಪಘಾತ ಪಡಿಸಿದೆ ಎಂದು ಬರೆಸಿರುತ್ತೇನೆ ಎಂದರೆ

ಸಾಕ್ಷಿ ಗಡಿಬಿಡಿಯಲ್ಲಿ ಬರೆಸಿರುತ್ತೇನೆ ಎನ್ನುತ್ತಾರೆ. ಸದರಿ ಅಪಘಾತ ರಾತ್ರಿ **9.30** ರ ಸಮಯದಲ್ಲಿ ಆಗಿತ್ತು. ಪಂಚನಾಮೆ ಕಾಲಕ್ಕೆ ನಾನು ಸ್ಥಳದಲ್ಲಿ ಇದ್ದು ಅಪಘಾತ ಸ್ಥಳವನ್ನು ತೋರಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೂ ಪೋಲಿಸರು ಪಂಚನಾಮೆಯನ್ನು ಸಂಜೆ **5.30** ರಿಂದ **6.30** ವರೆಗೆ ಜರುಗಿಸಿರುತ್ತಾರೆ ಎಂದು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.**5** ರಿಂದ **12** ಫೋಟೊ ಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಹಾಜುರಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೂ ಯಾವುದೇ ಅಪಘಾತವಾಗದೇ ಇದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ .**

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೊಲ್ ಜಯಕುಮಾರ ಹಿರಿಕುಡೆ.)**
**4** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.